**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 1249/2025**

| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ವಿರೇಶ ಕುಮಾರ ಸಿ ಜೆ ಬಿನ್ ಸಿ ಜಯಪ್ಪ<br>ವಯಸ್ಸುಃ 31 ವರ್ಷ,<br>ವಾಸ: ಮಂಜುನಾಥ ಕೃಪ , 3 ನೇ ಮೇನ್ 6 ನೇ ಕ್ರಾಸ್ , ವಿ ಶಿವಮೊಗ್ಗ, ತಾಃ ಶಿವಮೊಗ್ಗ ಜಿಲ್ಲೆ |

**ದೋಷಾರೋಪಣೆ**

**ಶ್ರೀಮತಿ ಮಹಾಲಕ್ಷ್ಮೀ ಜಿ 1**ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ ದಿಃ 11-06-2023 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಅಜ್ಜಿಹಳ್ಳಿ ಗ್ರಾಮದ ಅಂಜನೇಯ ದೇವಸ್ಥನದ ಮುಂಭಾಗ ಶಿವಮೊಗ್ಗ-ಚಿತ್ತಿರದುರ್ಗ ಎನ್ ಹೆಚ್-13 ರಸ್ತೆಯಲ್ಲಿ ಶಶಿಧರ ಎಂಬುವವರು ತಮ್ಮ ಮಾಲೀಕತ್ವದ ಕೆಎ-14/ಇವೈ-5866 ಟಿ ವಿ ಎಸ್ ಜುಪಿಟರ್ ಬೈಕಿನಲ್ಲಿ ಹಿಂಬದಿ ಸವಾರ್ನಾಗಿ ಮೃತ ರಂಗನಾಥ ಇವರನ್ನು ಕೂರಿಸಿಕೊಂಡು ಮಾವಿನಕಟ್ಟೆ ಗ್ರಾಮಕ್ಕೆ ಹೋಗಲು ರಸ್ತೆಯ ಎಡಬದಿಯಲ್ಲಿ ಬೈಕ್ ನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದು ಚನ್ನಗಿರಿ ಕಡೆಯಿಂದ ಆರೋಪಿಯಾದ ನೀನು ಚಾಸಾ-8 ರವರ ಮಾಲೀಕತ್ವದ ಕೆಎ-05/ಎಂಎನ್-6918 ನೇ ಕಾರನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಮೇಲ್ಕಂಡ ಬೈಕಿಗೆ ಡಿಕ್ಕಿಪಡಿಸಿ ವಾಹನವನ್ನು ನಿಲ್ಲಿಸದೆ ಹೋಗಿ ನಂತರ ಚಾಸಾ-13ರವರು ಕಾರನ್ನು ಹಿಡಿಯಲು ಹೋದಾಗ ಕಾರನ್ನು ಸ್ವಲ್ಪ ದೂರದಲ್ಲಿ ನಿಲ್ಲಿಸಿ ಓಡಿಹೋಗಿರುವುದರಿಂದ ಭಾ.ದಂ.ಸಂ.ಕಲಂ 279 ಮತ್ತು 187 ಐ ಎಂ ವಿ ಆಕ್ಟ್ ರ ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಮೇಲ್ಕಂಡ ಕಾರನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದುಶಶಿಧರ ಇವರ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಶಶಿಧರ ಮತ್ತು ರಂಗನಾಥ ಎನ್ನುವವರು ತೀವ್ರ ತರವಾದ ಪೆಟ್ಟು

ಬಿದ್ದು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ, ಆ ಮೂಲಕ ಭಾ.ದಂ.ಸಂ.ಕಲಂ 304(ಎ) ಅಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

(ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ)

ದಿನಾಂಕ: 02-08-2025 **(ಶ್ರೀಮತಿ ಮಹಾಲಕ್ಷ್ಮೀ ಜಿ )**

**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**1ನೇ ಹೆಚ್ಚುವರಿ   ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯದಲ್ಲಿ**

**<u>ಸಿಸಿ ನಂ:</u>1249/2025**

**1. ಕರ್ನಾಟಕ ಸರ್ಕಾರ (ಚನ್ನಗಿರಿ   ಪಿ.ಎಸ್ )**

**ವಿರುದ್ಧ**

ವಿರೇಶ ಕುಮಾರ ಸಿ ಜೆ  ಬಿನ್ ಸಿ ಜಯಪ್ಪ
ವಯಸ್ಸು: 31 ವರ್ಷ,

## <u>ಆರೋಪಿಯ ಹೇಳಿಕೆ</u>

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 02-08-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ: 02-08-2025

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**